**ಸಾಕ್ಷಿಗೆ ದಿನಾಂಕಃ 19.06.2024 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲು : ಪ್ರತಿವಾದಿ 4 ರಿಂದ 7 ರವರ ಪರ ಶ್ರೀ.ಹೆಚ್ ಆರ್ ಯು ವಕೀಲರಿಂದ :**

ಯಾವುದೇ ಒಬ್ಬ ವ್ಯಕ್ತಿ ಅವನಿಗೆ ಸೇರಿದ ಆಸ್ತಿಗಳನ್ನು ಮರಣ ಶಾಸನದ ಅಡಿಯಲ್ಲಿ ವಿಲೇವಾರಿ ಮಾಡಿದ ಪಕ್ಷದಲ್ಲಿ ಸದರಿ ಮರಣ ಶಾಸನವು ಆತನ ಮರಣದ ಬಳಿಕ ಜಾರಿಗೆ ಬರುತ್ತದೆ ಎಂದರೆ ಸಾಕ್ಷಿಯುಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಎಸ್ ಎಸ್ ಎಲ್ ಸಿ ವರೆಗೂ ವಿಧ್ಯಾ ಭ್ಯಾಸ ಮಾಡಿರುತ್ತೇನೆ. ನನಗೆ ಒಳ್ಳೆಯ ವ್ಯವಹಾರ ಜ್ಞಾನ ಇದೆ ಎಂದರೆ ಸರಿ. ಮರಣ ಶಾಸನ ಬರೆದಂತಹ ವ್ಯಕ್ತಿಯು ತೀರಿಕೊಂಡ ನಂತರ ಮರಣ ಶಾಸನದಲ್ಲಿ ತೋರಿಸಿರುವ ಆಸ್ತಿಗಳು ಕಾರ್ಯ ರೂಪಕ್ಕೆ ಹಾಗೂ ಅದರ ವಿಲೇವಾರಿ ಕುರಿತು, ತೀರಿಕೊಂಡ ವ್ಯಕ್ತಿಯ ಮರಣ ಶಾಸನ ಪತ್ರವನ್ನು ಹಾಗೂ ಮರಣ ಹೊಂದಿದ್ದ ವ್ಯಕ್ತಿಗೆ ಸಂಬಂಧ ಪಟ್ಟ ಮರಣ ಪ್ರಮಾಣ ಪತ್ರವನ್ನು ಸಂಬಂಧ ಪಟ್ಟ ಇಲಾಖೆಗಳಿಗೆ ನೀಡಬೇಕಾಗುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ವಾದ ಪತ್ರದಲ್ಲಿ ವಾದಿಯ ತಾಯಿ ಕುಲುಸುಂಬಿ ರವರು ದಾವಾ ಸ್ವತ್ತು ಅವರ ಮರಣ ನಂತರದಲ್ಲಿ ವಾದಿ ಹಾಗೂ ವಾದಿಯ ಸಹೋದರ ಮಹಮದ್ ಮಸ್ತಾನ್ ಹಾಗೂ ಇಮಾಮ್ ಸಾಹೇಬ್ ರವರ ಮಗ ಇಬ್ರಾಹಿಂ ಸಾಹೇಬ್ ಇವರಿಗೆ ಸೇರಬೇಕೆಂದು ಮರಣ ಶಾಸನ ಪತ್ರ ಬರೆದಿಟ್ಟಿರುವುದಾಗಿ ತಿಳಿಸಲಾಗಿದೆ ಎಂದರೆ ಸರಿ. ಸದರಿ ದಾಖಲೆಯಾದ ಮರಣ ಶಾಸನ ಪತ್ರವನ್ನು ನನ್ನ ತಂದೆ ವಿದ್ಯಾರಣ್ಯಪುರ ಗ್ರಾ.ಪಂ. ಗೆ ಮೇಲೆ ಹೇಳಿದ 3 ಜನರ ಹೆಸರಿಗೆ ಖಾತಾ ಬದಲಾವಣಾ ಕೋರಿ ಅರ್ಜಿ ಸಲ್ಲಿಸುವ ಸಮಯದಲ್ಲಿ ಕುಲುಸುಂಬಿ ರವರ ಮರಣ ಸಮರ್ಥನಾ ಮತ್ತು ಧೃಢೀಕರಣ ಪತ್ರವನ್ನು ಹಾಜರು ಪಡಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ.

3. ನನ್ನ ಪ್ರಮಾಣ ಪತ್ರದಲ್ಲಿ ನಾನು ನನ್ನ ತಂದೆ ಕುಲುಸುಂಬಿ ರವರು ಮರಣದ ನಂತರ ದಾವಾ ಸ್ವತ್ತಿನ ಖಾತೆಯನ್ನು ಮೇಲ್ಕಾಣಿಸಿದ 3 ವ್ಯಕ್ತಿಗಳ ಹೆಸರಿಗೆ ಬದಲಾವಣೆ ಕೋರಿ ವಿದ್ಯಾರಣ್ಯಪುರ ಗ್ರಾ.ಪಂ. ಗೆ ನನ್ನ ತಂದೆ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ದಾವಾ ಆಸ್ತಿಯ-

ಖಾತೆಯನ್ನು ಆ ಮೂರು ಜನರ ಹೆಸರಿಗೆ ಬದಲಾವಣೆ ಮಾಡಿರುವುದಿಲ್ಲ ಎಂದು ತೋರಿಸಿರುತ್ತೇನೆ ಎಂದರೆ ಸರಿ. ನನ್ನ ತಂದೆ ಸದರಿ ಮರಣ ಶಾಸನದ ಪ್ರಕಾರ ವಿದ್ಯಾರಣ್ಯಪುರ ಗ್ರಾ.ಪಂ. ರವರು ದಾವಾ ಆಸ್ತಿಯ ಖಾತೆಯನ್ನು ಮೇಲೆ ಹೇಳಿದ 3 ವ್ಯಕ್ತಿಗಳ ಹೆಸರಿಗೆ ಬದಲಾವಣೆ ಮಾಡದ ಕಾರಣ ಈ ದಾವೆಯನ್ನು ಘೋಷಣಾತ್ಮಕ ಪರಿಹಾರ ಕೋರಿ ನನ್ನ ತಂದೆ ಸಲ್ಲಿಸಿದ್ದ ಎಂದು ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ ಎಂದರೆ ಅದರ ಬಗ್ಗೆ ನನಗೆ ಈಗ ನೆನಪಿಲ್ಲ, ಸಾಕ್ಷಿ ಮುಂದುವರೆದು, ಸದರಿ ಮರಣ ಶಾಸನ ಹೊರತಾಗಿಯೂ ಸಹ ಮೇಲೆ ಹೇಳಿದ 3 ವ್ಯಕ್ತಿಗಳಿಗೆ ದಾವಾ ಆಸ್ತಿಯಲ್ಲಿ ಸಮವಾದ ಭಾಗ ಇರುತ್ತದೆ ಎಂದು ನುಡಿಯುತ್ತಾರೆ.

4. ನಾನು ಕುಲುಸುಂಬಿ ರವರು 1998 ರಲ್ಲಿ ತೀರಿಕೊಂಡ ಬಗ್ಗೆ ಅವರ ಮರಣ ಸಮರ್ಥನಾ ಧೃಢೀಕರಣ ಪತ್ರವನ್ನು ಈ ವರೆಗೂ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸದರಿ ಮರಣ ಶಾಸನ ಪತ್ರವನ್ನು ಕೊಪ್ಪದ ನೋಟರಿ ಮತ್ತು ನ್ಯಾಯವಾದಿಗಳಾದ ಶ್ರೀ ರತ್ನರಾಜ್ ರವರು ತಯಾರಿಸಿ ಕೊಟ್ಟಿರುವುದಾಗಿ ನಾನು ಈ ಹಿಂದೆ ಹೇಳಿದ್ದು, ಸದರಿ ಮರಣ ಶಾಸನ ತಯಾರಾಗುವ ಸಂದರ್ಭದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ. ಆ ದಿನ ಕೊಪ್ಪಕ್ಕೆ ಕುಲುಸುಂಬಿ ರವರನ್ನು ಯಾರು ಕರೆದುಕೊಂಡು ಹೋಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು, ಆ ದಿನ ನನ್ನ ತಂದೆಯು ಹೋಗಿದ್ದರು ಎಂದು ನುಡಿಯುತ್ತಾರೆ. ಶ್ರೀ ರತ್ನರಾಜ್ ರವರು ಸದರಿ ಮರಣ ಶಾಸನ ಪತ್ರವನ್ನು ತಯಾರಿಸಿ ಯಾರ ಕೈಯಲ್ಲಿ ಕೊಟ್ಟಿರುತ್ತಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

5. ನನ್ನ ಅಜ್ಜಿ ಕುಲುಸುಂಬಿ ರವರು ದಾಖಲಾತಿಗಳಿಗೆ ಸಹಿ ಮಾಡುತ್ತಿದ್ದರೋ ಅಥವಾ ಹೆಬ್ಬೆಟ್ಟು ಹಾಕುತ್ತಿದ್ದರೋ ಎನ್ನುವ ಬಗ್ಗೆ ನನಗೆ ನಿಖರವಾಗಿ ಗೊತ್ತಿಲ್ಲ. ಕುಲುಸುಂಬಿ ರವರು ಬರೆದಿಟ್ಟಿದ್ದಾರೆ ಎನ್ನಲಾದ ಮರಣ ಶಾಸನಕ್ಕೆ ಅವರು ಸಹಿ ಮಾಡಿರುತ್ತಾರೋ ಅಥವಾ ಹೆಬ್ಬೆಟ್ಟು ಹಾಕಿರುತ್ತಾರೋ ಎನ್ನುವ ಬಗ್ಗೆ ನನಗೆ ನಿಖರವಾಗಿ ಗೊತ್ತಿಲ್ಲ. ಸದರಿ ಮರಣ ಶಾಸನವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಿಪಿ-9 ಮರಣ ಶಾಸನ ಪತ್ರದಲ್ಲಿ ಸದರಿ ಮರಣ ಶಾಸನ ತಯಾರಾದ ದಿನಕ್ಕೆ 65 ವರ್ಷ ವಯಸ್ಸಾಗಿತ್ತು ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

6. ಜಿ.ಪಿ.ಎ (ನಿಪಿ-1) ಹಾಗೂ ನನ್ನ ತಂದೆ ಹೇಳಿ ಬರೆಸಿರುವ ನಮ್ಮ ಕುಟುಂಬದ ವಂಶವೃಕ್ಷ (ನಿಪಿ-2) ಪ್ರಮಾಣ ಪತ್ರದಲ್ಲಿ ನನ್ನ ತಂದೆಯ ವಯಸ್ಸು 2016 ನೇ ಇಸವಿಯಲ್ಲಿ 93 ವರ್ಷ ವಾಗಿತ್ತು ಎಂದು ನಮೂದು ಇರುತ್ತದೆ ಎಂದರೆ ಸರಿ. 1997 ರಿಂದ 2016 ನೇ ಸಾಲಿಗೆ 19 ವರ್ಷ ಕಾಲ ವಾಗುತ್ತದೆ ಎಂದರೆ ಸರಿ. ನಿಪಿ-1 ಮತ್ತು ನಿಪಿ-2 ರಲ್ಲಿ ತೋರಿಸಿದಂತೆ 2016 ನೇ ಇಸವಿಯಲ್ಲಿ ನನ್ನ ತಂದೆಗೆ 93 ವರ್ಷವಾಗಿದ್ದರೇ ಮತ್ತು ಅದರಿಂದ 19 ವರ್ಷವನ್ನು ಕಳೆದರೇ 1997 ರಲ್ಲಿ ನನ್ನ ತಂದೆಗೆ 74 ವರ್ಷವಾಗಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಿಪಿ-9 ರಲ್ಲಿ ನನ್ನ ಅಜ್ಜಿಗೆ 1997 ರಲ್ಲಿ 65 ವರ್ಷ ಎಂದು ತೋರಿಸಿದ್ದು, ಈಗ ಹೇಳಿದಂತೆ ನಿಪಿ-1 ಮತ್ತು ನಿಪಿ-2 ದಾಖಲೆಗಳ ಪ್ರಕಾರ ನನ್ನ ತಂದೆಗೆ 1997 ರಲ್ಲಿ 74 ವರ್ಷ ಆಗಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

7. ನಾನು ಹೇಳಿದ ಪ್ರಕಾರ ನನ್ನ ತಂದೆಯ ತಾಯಿ ದಿಃ07-04-1997 ರಂದು ನಿಪಿ -9 ರ ಪ್ರಕಾರ ಮರಣ ಶಾಸನ ಪತ್ರವನ್ನು ಬರೆದಿಟ್ಟಿದ್ದರು ಎಂದು ಹೇಳಿರುವ ವಿಚಾರ ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆಯ ತಾಯಿ ಕುಲುಸುಂಬಿ ರವರು ದಿಃ08-07-1977 ರಲ್ಲಿಯೇ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಯಾವತ್ತೂ ಸಹ ಇಮಾಮ್ ಸಾಹೇಬ್ ಮಗ ಇಬ್ರಾಹಿಂ ಸಾಬ್ ರವರಿಗೆ ಮಾತ್ರವೇ ಸೇರಿದ ಆಸ್ತಿಯಾಗಿದ್ದು, ಸದರಿ ಆಸ್ತಿಯಲ್ಲಿ ಫೀರ್ ಸಾಹೇಬ್ ಮಕ್ಕಳಾದಂತಹ ನನ್ನ ತಂದೆ ಮಹಮದ್ ಯೂಸುಫ್ ಗಾಗಲೀ ಮತ್ತು ನನ್ನ ಚಿಕ್ಕಪ್ಪ ಮಹಮದ್ ಮಸ್ತಾನ್ ಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಮಹಮದ್ ಮಸ್ತಾನ್ ಇಬ್ಬರಿಗೂ ಸಹ ಗೊತ್ತಿತ್ತು ಎಂದರೆ ಸರಿಯಲ್ಲ. ಆದಕಾರಣ ನನ್ನ ಅಜ್ಜಿ ಕುಲುಸುಂಬಿ ರವರು ದಿಃ08-07-1977 ರಂದು ತೀರಿಕೊಂಡ ಬಳಿಕದ ಸಮಯದಿಂದ ಈ ದಾವಾ ಹೂಡುವ ಸಮಯದವರೆಗೂ ದಾವಾ ಆಸ್ತಿಯಲ್ಲಿ ಅವರಿಬ್ಬರಿಗೆ ಯಾವುದೇ ಹಕ್ಕು ಇದೆ ಎಂದು ಎಲ್ಲೂ ಸಹ ಪ್ರಸ್ತಾಪ ಅಥವಾ ವಿವಾದ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

8. ನಾನು 2016 ನೇ ಸಾಲಿನಲ್ಲಿ ನಿಪಿ-1 ಮತ್ತು ನಿಪಿ-2 ದಾಖಲೆಗಳನ್ನು ಸೃಷ್ಟಿಸಿ ಹಾಗೂ ಕುಲುಸುಂಬಿ ರವರು ತೀರಿಕೊಂಡ ಸುಮಾರು 20 ವರ್ಷದ ನಂತರ ಅವರು ಬದುಕಿರುವುದಾಗಿ ಸುಳ್ಳಾಗಿ ತೋರಿಸಿ ನಿಪಿ-9 ಮರಣ ಶಾಸನವನ್ನು ಸೃಷ್ಟಿಸಿ ಈ ಸುಳ್ಳು ದಾವೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ತಾಯಿಗೆ ಕುಲುಸುಂಬಿ ರವರಿಗೆ ಯಾವತ್ತೂ ಸಹ ದಾವಾ ಆಸ್ತಿಯ ಮೇಲೆ ಯಾವುದೇ ರೀತಿಯ ಹಕ್ಕು ಪ್ರಾಪ್ತಿಯಾಗಿರಲಿಲ್ಲ ಎಂದರೆ ಸರಿಯಲ್ಲ.

9. ಯಾವುದೇ ಸರ್ಕಾರಿ ದಾಖಲೆಗಳಾಗಲೀ ಅಥವಾ ಪಂಚಾಯಿತಿ ಇಂದ ನೀಡಿದ ದಾಖಲೆಗಳಲ್ಲಾಗಿ ದಾವಾ ಆಸ್ತಿ ಕುಲುಸುಂಬಿ ರವರಿಗೆ ಸೇರಿದ ಆಸ್ತಿ ಎಂದು ಎಲ್ಲೂ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಖಾತೆ ಇಬ್ರಾಹಿಂ ಸಾಹೇಬ್ ರವರ ಹೆಸರಿನಲ್ಲಿ ಮಾತ್ರ ಇರುವುದಾಗಿ ಪಂಚಾಯಿತಿ ದಾಖಲಾತಿಗಳಲ್ಲಿ ಕಾಣುತ್ತದೆ ಎಂದರೆ ಸರಿಯಲ್ಲ. ಆ ರೀತಿ ಪಂಚಾಯಿತಿ ದಾಖಲೆಗಳಲ್ಲಿ ಇಬ್ರಾಹಿಂ ಸಾಹೇಬ್ ರವರ ಹೆಸರಿನಲ್ಲಿ ಮಾತ್ರ ದಾವಾ ಆಸ್ತಿಯ ಖಾತೆ ಇದ್ದು, ದಾವಾ ಹೂಡುವ ಪೂರ್ವದಲ್ಲಿ ಪಂಚಾಯಿತಿ ಅಧಿಕಾರಿಗಳ ಜೊತೆ ಶಾಮೀಲಾಗಿ ನಿಪಿ -6 ರಿಂದ ನಿಪಿ -8 ದಾಖಲಾತಿಗಳಲ್ಲಿ ಕುಲುಸುಂಬಿ ರವರ ಹೆಸರನ್ನು ಸೇರ್ಪಡೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಈ ರೀತಿ ಸೇರ್ಪಡೆ ಮಾಡಿರುವುದು ನಿಪಿ 6 ರಿಂದ ನಿಪಿ -8 ರಲ್ಲಿ ಮೇಲ್ನೋಟಕ್ಕೆ ಕಂಡು ಬರುತ್ತದೆ ಎಂದರೆ ಸರಿಯಲ್ಲ. ನಿಪಿ-6 ರಿಂದ ನಿಪಿ-8 ರಲ್ಲಿ ಇತರೆ ಆಸ್ತಿಗಳ ಖಾತೆದಾರರ ಹೆಸರು ತೋರಿಸುವುದಕ್ಕಿಂತ ವಿಭಿನ್ನವಾಗಿ ಹಾಗೂ ಬೇರೆ ಕಾಲಂ ನಲ್ಲಿ ಕುಲುಸುಂಬಿ ರವರ ಹೆಸರು ಕಾಣುತ್ತಿದ್ದು, ಮೆಲ್ನೋಟಕ್ಕೆ ಅದನ್ನು ಮೋಸದಿಂದ ಸೇರ್ಪಡೆ ಮಾಡಿರುವುದಾಗಿ ತೋರುತ್ತದೆ ಎಂದರೆ ಸರಿಯಲ್ಲ. ನಿಪಿ-6 ರಿಂದ ನಿಪಿ-8 3 ದಾಖಲೆಗಳನ್ನು ಪರಿಶೀಲನೆ ಮಾಡಿದಾಗ ಕುಲುಸುಂಬಿ ಎಂದು ಬರೆಯಲಾದ ಹೆಸರು ಬರೆದಿರುವ ಹಸ್ತಾಕ್ಷರ ಸದರಿ ದಾಖಲೆಗಳಲ್ಲಿ ನಮೂದಿರುವ ಬೇರೆ ಬರವಣಿಗೆಯ ಹಸ್ತಾಕ್ಷರಗಳಿಗಿಂತ ವಿಭಿನ್ನವಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-6 ರಿಂದ ನಿಪಿ -8 ದಾಖಲೆಗಳು ಮೂಲ ಪ್ರತಿಗಳಲ್ಲ ಮತ್ತು ಅವುಗಳನ್ನು ನಕಲು

ಮಾಡಿ ಧೃಢೀಕರಿಸಲಾಗಿರುವ ಪ್ರತಿಗಳು ಎಂದರೆ ಸರಿ. ಸಾಕ್ಷಿ ಮುಂದುವರೆದು, ಸದರಿ ದಾಖಲಾತಿಗಳನ್ನು ನನ್ನ ತಂದೆಯವರು ಪಡೆದುಕೊಂಡಿದ್ದು, ನನಗೆ ಅದರ ಬಗ್ಗೆ ಅಷ್ಟಾಗಿ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-6 ರಿಂದ ನಿಪಿ-8 ದಾಖಲಾತಿಗಳು ಧೃಢೀಕೃತ ನಕಲುಗಳಾದ ಕಾರಣ ಅದರಲ್ಲಿ ಬರೆದಿರುವ ಅಂಶಗಳು ಅಷ್ಟು ಸ್ವಚ್ಛವಾಗಿ ಕಾಣಿಸುತ್ತಿಲ್ಲ ಎಂದರೆ ಸರಿ. ಸದರಿ ನಿಪಿ-6 ರಿಂದ ನಿಪಿ-8 ದಾಖಲಾತಿಗಳಲ್ಲಿ ಬರೆದಿರುವ ಬರವಣಿಗೆಗಳು ಇನ್ನಷ್ಟು ಸ್ಪಷ್ಟವಾಗಿ ಕಂಡು ಬರಬೇಕಾದರೆ ಅವುಗಳ ಮೂಲ ಪ್ರತಿಯನ್ನು ಅವಲೋಕಿಸಬೇಕಾಗುತ್ತದೆ ಎಂದರೆ ಸರಿ. ಸದರಿ ನಿಪಿ-6 ರಿಂದ ನಿಪಿ -8 ದಾಖಲೆಗಳ ಮೂಲ ಪ್ರತಿಯನ್ನು ಹಾಜರು ಪಡಿಸಬೇಕಾಗಿ ಕೋರಿ ವಿದ್ಯಾರಣ್ಯಪುರ ಗ್ರಾಮ ಪಂಚಾಯಿತಿಗೆ 1 ನೇ ಪ್ರತಿವಾದಿಯ ವಾರಸ್ಸುದಾರರ ನ್ಯಾಯಾಲಯಕ್ಕೆ ಈ ಹಿಂದೆ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿಯ ಮೇಲೆ ಆದೇಶವಾದ ಮೇರೆಗೆ ವಿದ್ಯಾರಣ್ಯಪುರ ಗ್ರಾಮ ಪಂಚಾಯಿತಿಯ ಹಾಲಿ ಅಭಿವೃದ್ಧಿ ಅಧಿಕಾರಿಗಳು ನ್ಯಾಯಾಲಯಕ್ಕೆ ಹಾಜರಾಗಿ ನಿಪಿ-6 ರಿಂದ ನಿಪಿ-8 ದಾಖಲೆಗಳ ಮೂಲ ಪ್ರತಿಗಳು ಅವರ ಕಛೇರಿಯಲ್ಲಿ ಲಭ್ಯವಿರುವುದಿಲ್ಲ ಎಂದು ನ್ಯಾಯಾಲಯಕ್ಕೆ ನಿವೇದನೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

10. ನಿಪಿ-6 ರಿಂದ ನಿಪಿ-8 ದಾಖಲೆಗಳಲ್ಲಿ ಕುಲುಸುಂಬಿ ಎಂದು ಹೆಸರನ್ನು ಮೋಸವಾಗಿ ಪಂಚಾಯತ್ ಅಧಿಕಾರಿಗಳ ಜೊತೆ ಸೇರಿ ನಾನೇ ನಮೂದಿಸಿರುತ್ತೇನೆ ಮತ್ತು ಸದರಿ ದಾಖಲೆಗಳ ಮೂಲ ಪ್ರತಿ ನ್ಯಾಯಾಲಯಕ್ಕೆ ಹಾಜರು ಪಡಿಸಿದರೆ ಸದರಿ ವಿಷಯ ತಿಳಿದು ಬರುತ್ತದೆ ಎಂದು ಮತ್ತು ನನಗೆ ಕಾನೂನಡಿ ಮುಂದೆ ತೊಂದರೆಯಾಗುವುದಾಗಿ ಹೆದರಿ ಸದರಿ ದಾಖಲೆಗಳ ಮೂಲ ಪ್ರತಿಯನ್ನು ಪಂಚಾಯಿತಿ ಅಧಿಕಾರಿಗಳ ಜೊತೆ ಸೇರಿ ನಾಶ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಫೀರ್ ಸಾಬ್ ರವರ ಮಕ್ಕಳಾದ ನನ್ನ ತಂದೆ ಮಹಮದ್ ಯೂಸುಫ್ ಗಾಗಲೀ ಮತ್ತು ನನ್ನ ಚಿಕ್ಕಪ್ಪ ಮಹಮದ್ ಮಸ್ತಾನ್ ಗಾಗಲೀ ದಾವಾ ಸ್ವತ್ತಿನ ಮೇಲೆ ಯಾವತ್ತೂ ಅಧಿಕಾರ ಇಲ್ಲದಿದ್ದರೂ ಸಹ ಹಕ್ಕು ಇದೆ ಎಂದು ತೋರಿಸುವಂತೆ ಸುಳ್ಳು ದಾಖಲಾತಿಗಳನ್ನು ಸದರಿ ಕುಲುಸುಂಬಿ ರವರು ತೀರಿಕೊಂಡ ನಂತರ ಸೃಷ್ಟಿಸಿ ದಾವಾ ಆಸ್ತಿಯಲ್ಲಿ ಹಿಸ್ಸೆ ಕೋರಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮೃತ ಇಬ್ರಾಹಿಂ ಸಾಹೇಬ್-

ರವರ ಮಕ್ಕಳಿಗೆ ಮಾತ್ರ ಹಕ್ಕು ಇರುತ್ತದೆಯೇ ಹೊರತಾಗಿ ಹಾಲಿ ದಾವೆಯಲ್ಲಿ ಪ್ರಸ್ತುತ ಪಕ್ಷಗಾರರಾಗಿರುವ ಮೃತ ಮಹಮದ್ ಯೂಸುಫ್ ರವರ ವಾರಸ್ಸುದಾರರಿಗಾಗಲೀ ಅಥವಾ ಮೃತ ಮಹಮದ್ ಮಸ್ತಾನ್ ವಾರಸ್ಸುದಾರರಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ದಾವಾ ಆಸ್ತಿಯಲ್ಲಿ ಹಕ್ಕು ಇರುವುದಾಗಿ ಸುಳ್ಳಾಗಿ ಸಾಬೀತು ಪಡಿಸಲು ಸುಳ್ಳಾಗಿ ನಿಪಿ-2 ರ ವಂಶ ವೃಕ್ಷ ಪ್ರಮಾಣ ಪತ್ರವನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು : ಪ್ರತಿವಾದಿ 3(ಎ) ರಿಂದ 3(ಡಿ) ರವರ ಪರ ಶ್ರೀ.ಪಿ ಕೆ ವಕೀಲರಿಂದ : ಇಲ್ಲಾ :**

**:ಮರುವಿಚಾರಣೆ ಇಲ್ಲ:**
**(ದಿನಾಂಕ: 19.06.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಸಹಿ/-**
**ಪ್ರ.ದ.ನ್ಯಾ.ದಂ: ಶೃಂಗೇರಿ**